ಫಾರ್ಮಸಿ ಕಾಲೇಜಿನಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಆಗುತ್ತಿರುವ ಖರ್ಚಿನ ವಿವರದ ಬಗ್ಗೆ

ಳಟಿ. ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ).–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಫಾರ್ಮಸಿ ಕಾಲೇಜುಗಳು ಇರುವುದು ಮತ್ತು ಎಷ್ಟು ಖಾಸಗಿ ಫಾರ್ಮಸಿ ಕಾಲೇಜುಗಳು ಇರುವುದು ?

ಆ) ಸರ್ಕಾರಿ ಫಾರ್ಮಸಿ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವರು ?

ಇ) ಅವರಲ್ಲಿ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಹೊರ ರಾಜ್ಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಈ) ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ ಎಷ್ಟು ಹಣ ಸರ್ಕಾರದವರು ವೆಚ್ಚ ಮಾಡುತ್ತಿದ್ದಾರೆ ?

ಉ) ಆ ವಿದ್ಯಾರ್ಥಿಯು ಫಾರ್ಮಸಿ ಕೋರ್ಸನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಹಣ ವೆಚ್ಚವಾಗುತ್ತಿದೆ ?

ಶ್ರೀಮತಿ ಮನೋರಮ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).–

ಅ) ಔಷಧ ನಿಯಂತ್ರಣ ಇಲಾಖೆ

೧) ಸರ್ಕಾರಿ ಫಾರ್ಮಸಿ ಕಾಲೇಜು—೧

೨) ಖಾಸಗಿ ಫಾರ್ಮಸಿ ಕಾಲೇಜು—೫೫

	ಫಾರ್ಮಸಿ ಡಿಪ್ಲೊಮಾ	ಫಾರ್ಮಸಿ ಪದವಿ	ಸ್ನಾತಕೋತ್ತರ ಪದವಿಯಲ್ಲಿ ಫಾರ್ಮಸಿ
	೧೦೦	೧೬೦	೫೧
ಕರ್ನಾಟಕ	೯೯	೧೨೨	೫೧
ಹೊರರಾಜ್ಯ	೧	೮	ಇಲ್ಲ

ಆ) ೧) ಡಿಗ್ರಿ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ತಲಾ ೧೧,೭೮೫-೦೦ ರೂ. ಗಳು ವೆಚ್ಚವಾಗುತ್ತಿದೆ.

೨) ಎಮ್. ಫಾರ್ಮದ ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ ತಲಾ ೨೨,೮೦೦-೦೦ ರೂ.ಗಳು ವೆಚ್ಚವಾಗುತ್ತಿದೆ.

ಇ) ಡಿಪ್ಲೊಮಾ ರೂ. ೨೩,೫೭೦-೦೦

ಪದವಿ ರೂ. ೪೭,೪೦-೦೦

ಸ್ನಾತಕೋತ್ತರ ರೂ. ೪೫,೬೦೦-೦೦

ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳ ಬಗ್ಗೆ

ಳಟಿ. ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ).–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳ ಸಂಖ್ಯೆ ಎಷ್ಟು ? (ಹೆಸರು ಹಾಗೂ ವಿವರಗಳನ್ನು ಒದಗಿಸುವುದು)

ಆ) ಇವುಗಳ ಪೈಕಿ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ಈ ವಿದ್ಯಾರ್ಥಿಗಳ ಪೈಕಿ ರಾಜ್ಯದ ವಿದ್ಯಾರ್ಥಿಗಳೆಷ್ಟು ಹಾಗೂ ರಾಜ್ಯದ ವಿದ್ಯಾರ್ಥಿಗಳು ಎಷ್ಟು ?